ಸ್ಪೀಕರ್ ಶಾಖೆ
ST D
17/3/2020

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 181 (1420+1548) |
| 02 | ಸದಸ್ಯರ ಹೆಸರು | : ಶ್ರೀ ಲಹರ್ ಸಿಂಗ್ ಸಿರೋಯಾ ಹಾಗೂ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ |
| 03 | ಉತ್ತರಿಸುವ ದಿನಾಂಕ | : 19.03.2020 |
| 04 | ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಜನ ಅಕ್ರಮ ಬಾಂಗ್ಲಾ ವಲಸಿಗರು ವಾಸವಾಗಿದ್ದಾರೆ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ರಾಜ್ಯದಲ್ಲಿ ಒಟ್ಟು 395 ಅಕ್ರಮ ಬಾಂಗ್ಲಾ ವಲಸಿಗರು ವಾಸವಾಗಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧ-ಅ** ರಲ್ಲಿ ಲಗತ್ತಿಸಿದೆ. |
| ಆ) | ಬೆಂಗಳೂರು ಮತ್ತು ಬೆಳಗಾವಿಯಂತರ ಮಹಾನಗರಗಳಲ್ಲಿ ಬಾಂಗ್ಲಾ ವಲಸಿಗರು ಅಕ್ರಮವಾಗಿ ನೆಲೆಸಿರುವ/ವಾಸಿಸುತ್ತಿರುವ ಹಾಗೂ ಅವರಿಗೆ ಅಕ್ರಮವಾಗಿ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಇ) | ಹಾಗಿದ್ದಲ್ಲಿ, ಮಹಾನಗರಗಳಲ್ಲಿ ನೆಲೆಸಿರುವ ಬಾಂಗ್ಲಾ ವಲಸಿಗರ ಸಂಖ್ಯೆ ಎಷ್ಟು; ಅಂತಹವರನ್ನು ಗುರುತಿಸಲಾಗಿದೆಯೇ; ಅಕ್ರಮ ವಲಸಿಗರನ್ನು ಗಡಿಪಾರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಮಹಾನಗರಗಳಲ್ಲಿ ನೆಲೆಸಿರುವ ಬಾಂಗ್ಲಾ ವಲಸಿಗರ ಸಂಖ್ಯೆ: 342 ವಿವರವನ್ನು **ಅನುಬಂಧ-ಆ**ರಲ್ಲಿ ನೀಡಲಾಗಿದೆ.<br><br>ಸರ್ಕಾರವು ಅಕ್ರಮ ವಲಸಿಗರ ವಿರುದ್ಧ ಕಾನೂನು ರೀತಿಯ ಕ್ರಮಕೈಗೊಂಡಿದ್ದು ಪ್ರಕರಣ ಮುಕ್ತಾಯವಾದ ನಂತರ ಘನ ನ್ಯಾಯಾಲಯದ ಆದೇಶ ಪಡೆದು ಬಾಂಗ್ಲಾ ವಲಸಿಗರನ್ನು ಅವರ ದೇಶಕ್ಕೆ ಗಡಿಪಾರು (ಡಿಪೋರ್ಟ್) ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಅಕ್ರಮ ವಿದೇಶಿಯರಿಗೆ ಸರ್ಕಾರದ ಸೌಲಭ್ಯಗಳನ್ನು (ರೇಷನ್ ಕಾರ್ಡ್, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ) ಒದಗಿಸಲು ನೆರವಾದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ; ಇದರ ಪರಿಶೀಲನೆ ಯಾವ ಹಂತದಲ್ಲಿದೆ; (ವಿವರ ಒದಗಿಸುವುದು) | ➢ ಅಕ್ರಮ ವಿದೇಶಿಯರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಲು ನೆರವಾದವರ ವಿರುದ್ಧ ಬೆಂಗಳೂರು ನಗರದ ಬೆಳಂದೂರು, ಕುಮಾರಸ್ವಾಮಿ ಲೇಔಟ್ ಮತ್ತು ಬನಶಂಕರಿ ಪೊಲೀಸ್ ಠಾಣೆಗಳಲ್ಲಿ ತಲಾ 01ರಂತೆ ಒಟ್ಟು 03 ಪ್ರಕರಣಗಳು ದಾಖಲಾಗಿರುತ್ತವೆ.<br>➢ ಸದರಿ ಪ್ರಕರಣಗಳ ಪ್ರಸ್ತುತ ಹಂತವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ. |

| | | |
|---|---|---|
| ಉ) | ವಿದೇಶಿಯರು ನಗರದಲ್ಲಿ ಕಾನೂನು ಬಾಹಿರ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಎಷ್ಟು ಜನರ ವಿರುದ್ಧ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ; ಅವಧಿ ಮೀರಿ ರಾಜ್ಯದಲ್ಲಿ ನೆಲೆಸಿರುವ ಇವರನ್ನು ಹೊರ ಹಾಕಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು) | ➤ ಕಳೆದ 10 ವರ್ಷಗಳಲ್ಲಿ ಕಾನೂನುಬಾಹಿರ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಒಟ್ಟು 658 ವಿದೇಶಿಯರ ವಿರುದ್ಧ ಪ್ರಕರಣಗಳು ದಾಖಲಾಗಿದ್ದು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.<br>➤ ವೀಸಾ ಅವಧಿ ಮುಗಿದಿದ್ದರು ಅಕ್ರಮವಾಗಿ ವಾಸವಿರುವ ವಿದೇಶಿಯರನ್ನು ಪತ್ತೆ ಹಚ್ಚುವ ಬಗ್ಗೆ ಎಲ್ಲಾ ಘಟಕಾಧಿಕಾರಿಗಳಿಗೆ ತಿಳಿಸಲಾಗಿದ್ದು ಅಂತಹವರು ಕಂಡುಬಂದಲ್ಲಿ ಕೂಡಲೇ ಕಾನೂನು ಕ್ರಮವನ್ನು ಜರುಗಿಸುವಂತೆ ಹಾಗೂ ಠಾಣಾ ವ್ಯಾಪ್ತಿಯ ಬಾತ್ಮಿದಾರರ ಮೂಲಕವು ಮಾಹಿತಿಯನ್ನು ಸಂಗ್ರಹಿಸುವಂತೆಯೂ ಸೂಚಿಸಲಾಗಿರುತ್ತದೆ.<br>➤ ಪತ್ತೆಯಾದ ಅನಧಿಕೃತ ವಿದೇಶಿಯರನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಅವರ ದೇಶಕ್ಕೆ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. |

ಸಂಖ್ಯೆ: ಒಇ 122 ಪಿಎಂಎಸ್ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

## "ಅನುಬಂಧ"-ಅ

**ರಾಜ್ಯದಲ್ಲಿ ಒಟ್ಟು 395 ಅಕ್ರಮ ಬಾಂಗ್ಲಾ ವಲಸಿಗರು ವಾಸವಾಗಿರುವ, ಜಿಲ್ಲಾವಾರು ವಿವರ.**

| ಕ್ರ. ಸಂ. | ಜಿಲ್ಲೆಗಳು/ ಘಟಕಗಳು | ಗುರುತಿಸಿರುವ ಅಕ್ರಮ ಬಾಂಗ್ಲಾ ವಲಸಿಗರು | ಗಡಿಪಾರು ಮಾಡಲಾದ ಅಕ್ರಮ ಬಾಂಗ್ಲಾ ವಲಸಿಗರು | ಪ್ರಸ್ತುತ ನೆಲೆಸಿರುವ ಬಾಂಗ್ಲಾ ವಲಸಿಗರು |
|---|---|---|---|---|
| 1 | ಬೆಂಗಳೂರು ನಗರ | 419 | 103 | 316 |
| 2 | ಮಂಗಳೂರು ನಗರ | 01 | 00 | 01 |
| 3 | ಮೈಸೂರು ನಗರ | 28 | 03 | 25 |
| 4 | ಬೆಳಗಾವಿ ನಗರ | 12 | 12 | 00 |
| 1 | ರಾಮನಗರ | 13 | 03 | 10 |
| 2 | ದಕ್ಷಿಣ ಕನ್ನಡ | 15 | 14 | 01 |
| 3 | ದಾವಣಗೆರೆ | 01 | 0 | 01 |
| 4 | ಕೆ.ಜಿ.ಎಫ್. | 04 | 0 | 04 |
| 5 | ಎಸ್.ಪಿ. ರೈಲ್ವೆ, ಬೆಂಗಳೂರು | 06 | 02 | 04 |
| 6 | ಚಿಕ್ಕಮಗಳೂರು | 01 | 01 | 00 |
| 7 | ಮಂಡ್ಯ | 16 | 01 | 15 |
| 8 | ಮೈಸೂರು | 13 | 04 | 09 |
| 9 | ಶಿವಮೊಗ್ಗ | 04 | 00 | 04 |
| 10 | ವಿಜಯಪುರ | 33 | 33 | 00 |
| 11 | ಕೊಡಗು | 01 | 01 | 00 |
| 12 | ಬಳ್ಳಾರಿ | 02 | 02 | 00 |
| 13 | ಚಿತ್ರದುರ್ಗ | 04 | 00 | 04 |
| 14 | ರಾಯಚೂರು | 01 | 0 | 01 |
|  | **ಒಟ್ಟು** | **574** | **179** | **395** |